ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

**ಪತ್ರಿಕಾ ತುಣುಕುಗಳು**
**PAPER CLIPPINGS**

ಲಾಖೆ / ವಿಷಯ : DEPARTMENT / SUBJECT: ವಿಧಾನಸಭೆ ಅಧಿವೇಶನ

ತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 10/3/21

# ಆರು ಸಚಿವರಿಗೆ ಕಾಂಗ್ರೆಸ್ ಬಹಿಷ್ಕಾರ

## ಸದನದಲ್ಲಿ ಪ್ರಶ್ನೆ ಕೇಳದಿರಲು ನಿರ್ಧಾರ

ಮಾನಹಾನಿಕರ ಸುದ್ದಿ ಪ್ರಕಟಿಸದಂತೆ ಕೋರ್ಟ್‌ನಿಂದ ತಡೆಯಾಜ್ಞೆ ತಂದಿರುವ ಮಿತ್ರಮಂಡಳಿಯ 6 ಸಚಿವರಿಗೆ ವಿಧಾನ ಮಂಡಲದ ಉಭಯ ಸದನಗಳಲ್ಲಿ ಪ್ರತಿಪಕ್ಷ ಕಾಂಗ್ರೆಸ್ ಬಹಿಷ್ಕಾರ ಹಾಕಿದೆ. ಈ ಸಚಿವರಿಗೆ ಯಾವುದೇ ಪ್ರಶ್ನೆ ಕೇಳಬಾರದು ಎಂಬ ನಿರ್ಧಾರ ತೆಗೆದುಕೊಂಡಿರುವ ಕಾಂಗ್ರೆಸ್ ಪಕ್ಷ, ಈ ಸಚಿವರ ರಾಜೀನಾಮೆಗೂ ಒತ್ತಾಯಿಸಿದೆ. ವಿ.ಕ. 10/3/21

ಮಂಗಳವಾರದ ಪ್ರಶ್ನೋತ್ತರ ಕಲಾಪದಲ್ಲಿ ಸಚಿವ ಕೆ.ಸಿ.ನಾರಾಯಣ ಗೌಡ ಅವರಿಗೆ ವಿಧಾನಸಭೆಯಲ್ಲಿ ಪ್ರಶ್ನೆ ಕೇಳಲು ಕಾಂಗ್ರೆಸ್‌ನ ಪುಟ್ಟರಂಗಶೆಟ್ಟಿ ನಿರಾಕರಿಸಿದರು. ಹಾಗೆಯೇ ಪರಿಷತ್‌ನಲ್ಲಿ ಸಚಿವ ಬೈರತಿ ಬಸವರಾಜು ಅವರಿಗೆ ಪ್ರಶ್ನೆ ಕೇಳುವುದಿಲ್ಲವೆಂದು ಕಾಂಗ್ರೆಸ್‌ನ ಆರ್. ಪ್ರಸನ್ನಕುಮಾರ್ ವಿರೋಧಿಸಿದರು. ಜತೆಗೆ ಬಸವರಾಜ ಪಾಟೀಲ್ ಇಟಗಿ ಕೂಡ ಪರಿಷತ್‌ನಲ್ಲಿ ಪ್ರಶ್ನೆ ಕೇಳಲು ನಿರಾಕರಿಸಿದರು. ಇದರಿಂದ ಉಭಯ ಸದನಗಳಲ್ಲೂ ಮಿತ್ರಮಂಡಳಿಯ ಸಚಿವರಿಗೆ ಇರಸುಮುರಸು ಆಗುವಂತಾಯಿತು.

ಸಚಿವ ನಾರಾಯಣ ಗೌಡ ಅವರಿಗೆ ಚುಕ್ಕೆ ಗುರುತಿನ ಪ್ರಶ್ನೆ ಕೇಳುವ ಸರದಿ ಬಂದಾಗ "ನಾನು ಅವರಿಗೆ ಪ್ರಶ್ನೆ ಕೇಳುವುದಿಲ್ಲ. ಅವರಿಗೆ ನೈತಿಕತೆಯಿಲ್ಲ," ಎಂದು ಪುಟ್ಟರಂಗಶೆಟ್ಟಿ ಹೇಳಿದರು. ತಕ್ಷಣವೇ ನಾರಾಯಣ ಗೌಡ ಜತೆಗೆ ಸದನದಲ್ಲಿದ್ದ ಮಿತ್ರಮಂಡಳಿ ಕೋಟಾದ ಸಚಿವರು ಕಾಂಗ್ರೆಸ್ ವಿರುದ್ಧ ತಿರುಗಿ ಬಿದ್ದರು. ಇದರಿಂದ ಜೋರು ಜಟಾಪಟಿ ನಡೆಯಿತು. ಪರಿಷತ್‌ನಲ್ಲೂ ಸಚಿವ ಬೈರತಿ ಬಸವರಾಜು ಅವರಿಗೆ ಉತ್ತರಿಸುವ ನೈತಿಕತೆ ಇಲ್ಲವೆಂದು ಪ್ರಸನ್ನಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

"ಸಚಿವರು ಉತ್ತರ ನೀಡಲು ಸಿದ್ಧರಾಗಿದ್ದಾರೆ. ಪ್ರಶ್ನೆ ಕೇಳುವುದು ನಿಮ್ಮ ಹಕ್ಕು. ಅದರಂತೆ ಪ್ರಶ್ನೆ ಕೇಳಬಹುದು ಎನ್ನುವುದು ನನ್ನ ಅಭಿಪ್ರಾಯ," ಎಂದು ವಿಧಾನಸಭೆಯಲ್ಲಿ ಪುಟ್ಟರಂಗಶೆಟ್ಟಿ ಅವರಿಗೆ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಸೂಚಿಸಿದರು. ಪರಿಷತ್‌ನಲ್ಲೂ "ಪ್ರಶ್ನೆ ಕೇಳುವುದು ನಿಮ್ಮ ಹಕ್ಕು. ಆದರೆ, ಏಕೆ ಪ್ರಶ್ನೆ ಕೇಳುತ್ತಿಲ್ಲ ಎಂದು ನಾನು ಒತ್ತಾಯ ಮಾಡಲಾಗುವುದಿಲ್ಲ. ಪ್ರಶ್ನೋತ್ತರ ಅವಧಿಯಲ್ಲಿ ಬೇರೆ ವಿಷಯಗಳ ಚರ್ಚೆಗೆ ಅವಕಾಶವಿಲ್ಲ," ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು. ಸದಸ್ಯರ ಮಾತುಗಳನ್ನು ಕಡತದಿಂದ ತೆಗೆಯಬೇಕು. ಪ್ರಶ್ನೆಯಷ್ಟೇ ಕಡತಕ್ಕೆ ಹೋಗಬೇಕು ಎಂದೂ ಸಭಾಪತಿ ಸೂಚಿಸಿದರು. ಸದಸ್ಯರು ಅಸಂಸದೀಯ ಪದ ಬಳಸಿಲ್ಲ. ಹಾಗಾಗಿ ಕಡತದಿಂದ ತೆಗೆಯುವ ಅಗತ್ಯವಿಲ್ಲವೆಂದು ಕಾಂಗ್ರೆಸ್‌ನ ಸಿ.ಎಂ.ಇಬ್ರಾಹಿಂ, ಬಿ.ಕೆ. ಹರಿಪ್ರಸಾದ್, ಎಂ.ನಾರಾಯಣಸ್ವಾಮಿ ಇದಕ್ಕೆ ಆಕ್ಷೇಪಿಸಿದರು.

ಸಚಿವ ನಾರಾಯಣ ಗೌಡ ಅವರಿಗೆ ಪ್ರಶ್ನೆ ಕೇಳುವುದಿಲ್ಲವೆಂದು ವಿಧಾನಸಭೆಯಲ್ಲಿ ಗಲಾಟೆ ನಡೆಯುವಾಗ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಸದನದಲ್ಲಿ ಇರಲಿಲ್ಲ. ಬಳಿಕ ಬಂದ ಅವರು ಪ್ರತಿಪಕ್ಷದ ಮುಖ್ಯ ಸಚೇತಕ ಡಾ. ಅಜಯ್ ಸಿಂಗ್ ಅವರಿಂದ ವಿವರ ಪಡೆದುಕೊಂಡರು. ಬುಧವಾರದ ಕಲಾಪದಲ್ಲಿ ಮಿತ್ರಮಂಡಳಿಯ ಬಹುತೇಕ ಸಚಿವರ ಇಲಾಖೆಗೆ ಸಂಬಂಧಿಸಿದ ಪ್ರಶ್ನೆಗಳಿವೆ. ಈ ಸಂದರ್ಭದಲ್ಲಿ ಹೋರಾಟ ಪ್ರಖರಗೊಳಿಸಬೇಕು ಎಂಬ ತೀರ್ಮಾನವನ್ನು ಕಾಂಗ್ರೆಸ್ ತೆಗೆದುಕೊಂಡಿದೆ.

### ಬಿಎಸಿಗೂ ಅಸಹಕಾರ

ಈ ನಡುವೆ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅಧ್ಯಕ್ಷತೆಯಲ್ಲಿ ಮಂಗಳವಾರ ಬೆಳಗ್ಗೆ ನಡೆದ ಕಲಾಪ ಸಲಹಾ ಸಮಿತಿ(ಬಿಎಸಿ) ಸಭೆಗೂ ಪ್ರತಿಪಕ್ಷ ಕಾಂಗ್ರೆಸ್ ಬಹಿಷ್ಕಾರ ಹಾಕಿತು.